ದಿನಾಂಕಃ **22/10/2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.
ಪಾಟೀ ಸವಾಲುಃ ಪ್ರತಿವಾದಿ ನಂ.**1, 4** ರಿಂದ **6, 9, 11, 15** ರಿಂದ **17, 19** ರಿಂದ **23** ರವರ ಪರವಾಗಿ ಶ್ರೀ ಎಸ್ ಎ ಎ ವಕೀಲರಿಂದಃ

6. ನಿಪಿ-23 ರ ಪಾಲು ಪಟ್ಟಿ ಒಂದನ್ನು ಹೊರತುಪಡಿಸಿ ಬೇರೆ ಪಾಲು ಪಟ್ಟಿ ಆಗಿದೆಯೇ ಎಂಬ ಪ್ರಶ್ನೆಗೆ ಮತ್ತೊಂದು ಪಾಲು ಪಟ್ಟಿ 2004 ರಲ್ಲಿ ಆಗಿದೆ ಎಂದು ನುಡಿಯುತ್ತಾರೆ. ನಿಪಿ-23 ಮತ್ತು 2004 ರಲ್ಲಿ ಆದ ಪಾಲುಪಟ್ಟಿಗಳಲ್ಲಿ ನಮ್ಮ ಕುಟುಂಬದ ಎಲ್ಲಾ ಸ್ವತ್ತುಗಳು ಸೇರಿಕೊಂಡಿವೆ ಎಂದರೆ ಸರಿ. ಸರ್ವೇ ನಂ.33, 35/2, 35/3 ರ ಸ್ವತ್ತುಗಳು 2004 ರ ಪಾಲು ಪಟ್ಟಿಯಲ್ಲಿ ಸೇರಿಲ್ಲ. 2004ರ ಪಾಲು ಪಟ್ಟಿ ನನ್ನ ಬಳಿ ಇರುತ್ತದೆ. 2004ರ ಪಾಲು ಪಟ್ಟಿಯಲ್ಲಿ ವಾದಿ ನಂ.3 ರಿಂದ 7 ರವರು ಪಕ್ಷಗಾರರಾಗಿರುತ್ತಾರೆ. ಆ ಪಾಲು ಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಸರ್ವೇ ನಂ.33, 35/2, 35/3 ರ ಸ್ವತ್ತುಗಳು ನಮ್ಮ ಕುಟುಂಬಕ್ಕೆ ಸೇರದೆ ಇರುವ ಕಾರಣ ಅವುಗಳನ್ನು 2004ರ ಪಾಲು ಪಟ್ಟಿಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಎಲ್ಲರನ್ನೂ ಒಗ್ಗೂಡಿಸಿ ಪಾಲು ಪತ್ರ ತಯಾರಿಸಲು ಸಾಧ್ಯವಾಗದ ಕಾರಣ ಆ ಸ್ವತ್ತುಗಳನ್ನು 2004 ರ ಪಾಲು ಪಟ್ಟಿಯಲ್ಲಿ ಸೇರಿಸಿರಲಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.33, 35/2, 35/3 ರ ಸ್ವತ್ತುಗಳನ್ನು ಯಾವ ಕಾರಣಕ್ಕಾಗಿ 2004 ರ ಪಾಲು ಪಟ್ಟಿಯಲ್ಲಿ ಸೇರಿಸಲಾಗಿಲ್ಲ ಎಂಬ ಬಗ್ಗೆ ಹೇಳಿ 2004ರ ಪಾಲು ಪಟ್ಟಿಯಲ್ಲಿ ಬರೆಸಿಲ್ಲ. ಸರ್ವೇ ನಂ.35/2 ರ ಸ್ವತ್ತು ನಮ್ಮ ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.35/2 ರಲ್ಲಿ 1 ಎಕರೆ 17 ಗುಂಟೆ ಜಮೀನು ಇರುತ್ತದೆ. ಸರ್ವೇ ನಂ.35/2 ರ ಜಮೀನಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆ ಒಂದೇ ನಂಬರ್ ನಲ್ಲಿ ಇರುವುದಿಲ್ಲ. ಅದನ್ನು 3 ವಿಭಾಗಗಳಾಗಿ ಮಾಡಲಾಗಿರುತ್ತದೆ. ಮೊದಲನೇ ಭಾಗ ಸಣದಯ್ಯ @ ಸಣದು ರವರಿಗೆ 3 ಗುಂಟೆ, 2ನೇ ಭಾಗ ಎ.ಎನ್.ಪಾಪಣ್ಣ ರವರಿಗೆ 3 ಗುಂಟೆ, 3ನೇ ಭಾಗ ನನ್ನ ತಂದೆ ಎ.ಎನ್.ಪುಟ್ಟಯ್ಯ ರವರಿಗೆ 3 ಭಾಗ ಬಂದಿರುತ್ತದೆ. ಪಹಣಿಗಳು ಅದೇ ರೀತಿ ಬಂದಿರುತ್ತವೆ. ಸರ್ವೇ ನಂ.35/2 ರ ಪ್ರಕಾರ ಪಹಣಿಗಳಲ್ಲಿ ಹೆಸರು ನಮೂದಾಗಿರುವ ರೀತಿಯಲ್ಲಿ ಸ್ವಾದೀನದಲ್ಲಿ ಇರುತ್ತೇವೆ. ಸದರಿ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ, ಹಾಜರುಪಡಿಸುತ್ತೇನೆ. ಸಣದಯ್ಯ @ ಸಣದು

ರವರ ಸ್ವಾದೀನದಲ್ಲಿರುವ ಸ್ವತ್ತಿನ ಚೆಕ್ಕುಬಂದಿ ಎಂದರೆ ಪೂರ್ವಕ್ಕೆ ಹೆಂಟೆಗೆರೆ ಸಣ್ಣಪ್ಪನವರ ಜಮೀನು, ಪಶ್ಚಿಮಕ್ಕೆ ಡಕ್ಕಣಾಚಾರಿಯವರ ಜಮೀನು, ಉತ್ತರಕ್ಕೆ ನಮ್ಮದೇ ಜಮೀನು, ದಕ್ಷಿಣಕ್ಕೆ ನನ್ನ ಚಿಕ್ಕಪ್ಪ ಎ ಎನ್ ಪಾಪಣ್ಣರವರ ಜಮೀನು ಇರುತ್ತದೆ. ಎ.ಎನ್. ಪಾಪಣ್ಣರವರಿಗೆ ಸಂಬಂಧಿಸಿದ ಜಮೀನು 3 ಗುಂಟೆ ಇದ್ದು ಅದರ ಚೆಕ್ಕುಬಂದಿ ಎಂದರೆ ಪೂರ್ವಕ್ಕೆ ಹೆಂಟೆಗೆರೆ ಸಣ್ಣಪ್ಪನವರ ಜಮೀನು, ಪಶ್ಚಿಮಕ್ಕೆ ಡಕ್ಕಣಾಚಾರಿಯವರ ಜಮೀನು, ಉತ್ತರಕ್ಕೆ ಸಣದಯ್ಯ @ ಸಣದು ರವರ ಜಮೀನು, ದಕ್ಷಿಣಕ್ಕೆ ಎ ಎನ್ ಪುಟ್ಟಯ್ಯರವರ ಜಮೀನು ಇರುತ್ತದೆ. ನಮ್ಮ ತಂದೆ ಎ ಎನ್ ಪುಟ್ಟಯ್ಯರವರಿಗೆ ಸಂಬಂಧಿಸಿದ ಜಮೀನು 3 ಗುಂಟೆ ಇದ್ದು ಅದರ ಚೆಕ್ಕುಬಂದಿ ಎಂದರೆ ಪೂರ್ವಕ್ಕೆ ಹೆಂಟೆಗೆರೆ ಸಣ್ಣಪ್ಪನವರ ಜಮೀನು, ಪಶ್ಚಿಮಕ್ಕೆ ಡಕ್ಕಣಾಚಾರಿಯವರ ಜಮೀನು, ಉತ್ತರಕ್ಕೆ ಎ ಎನ್ ಪಾಪಣ್ಣ ರವರ ಜಮೀನು, ದಕ್ಷಿಣಕ್ಕೆ ಯೋಗಾಚಾರ್ ರವರ ಜಮೀನು ಇರುತ್ತದೆ. ನಾನು ಮೇಲೆ ಹೇಳಿದ ಚೆಕ್ಕುಬಂದಿ ಸರ್ವೇ ನಂ.35/2 ರ ಚೆಕ್ಕುಬಂದಿ ಆಗಿರುವುದಿಲ್ಲ ಅದು ಸರ್ವೇ ನಂ.35/3 ರ ಚೆಕ್ಕುಬಂದಿ ಎಂದರೆ ಸರಿಯಲ್ಲ. ಈ ದಾವೆಗಾಗಿ ಮೇಲೆ ಹೇಳಿದ ಚೆಕ್ಕುಬಂದಿಯನ್ನು ಸೃಷ್ಟಿಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು